# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ಉದ್ಯೋಗ ಪ್ರಕಟಣೆ ಸಂಖ್ಯೆ: ಚಾವಿಸನಿನಿ/ಪ್ರವ್ಯ(ಆ ಮತ್ತು ಮಾ.ಸಂ)/ವ್ಯ-1/ಸವ್ಯ-1/ಸಮಾನೇ/14-15/ 19144 ದಿನಾಂಕ: 09 MAR 201

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದಲ್ಲಿ ವೇತನ ಶ್ರೇಣಿ ರೂ.7950-150-8100-190-9050-240-10250-300-11750-360-16790, ರಲ್ಲಿ ಸಹಾಯಕ ಮಾರ್ಗಕರ್ಮಿ ಹುದ್ದೆಗಳನ್ನು ಭರ್ತಿ ಮಾಡಲು ಹತ್ತನೇ ತರಗತಿಯಲ್ಲಿ ಉತ್ತೀರ್ಣರಾಗಿ ತದನಂತರ ಕವಿಮಂ/ ಕವಿಪ್ರನಿನಿ ಕೈಗಾರಿಕಾ ತರಬೇತಿ ಕೇಂದ್ರದಿಂದ ಮೂರು ವರ್ಷದ "ಲೈನಮನ್ ವೃತ್ತಿ/ ಎಲೆಕ್ಟ್ರಿಷಿಯನ್ ವೃತ್ತಿ" ಯಲ್ಲಿ ಉತ್ತೀರ್ಣರಾಗಿ ಪ್ರಮಾಣ ಪತ್ರ ಹೊಂದಿರುವ ಮಹಿಳಾ ಹಾಗೂ ಪುರುಷ ಅಭ್ಯರ್ಥಿಗಳಿಂದ, ನಿಗದಿತ ನಮೂನೆಯಲ್ಲಿ "ಆನ್ ಲೈನ್"(ON LINE) ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

1. **ಹುದ್ದೆಗಳ ವರ್ಗೀಕರಣ :**

ಕವಿಮಂ/ ಕವಿಪ್ರನಿವಿ ಕೈಗಾರಿಕಾ ತರಬೇತಿ ಕೇಂದ್ರದಿಂದ ಮೂರು ವರ್ಷದ **"ಲೈನಮನ್ ವೃತ್ತಿ/ ಎಲೆಕ್ಟ್ರಿಷಿಯನ್ ವೃತ್ತಿ"** ಯಲ್ಲಿ ಉತ್ತೀರ್ಣರಾಗಿ ಐ.ಟಿ.ಸಿ ಪ್ರಮಾಣ ಪತ್ರ ಹೊಂದಿರುವ ಅಭ್ಯರ್ಥಿಗಳಿಗೆ.

| ಸಮತಲ ಮೀಸಲಾತಿ | ಪ.ಜಾ | ಪ.ಪ. | ಸಾಮಾನ್ಯ | ಪ್ರ. I | ಪ್ರ. IIA | ಪ್ರ. IIB | ಪ್ರ. IIIA | ಪ್ರ. IIIB | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 7 | 1 | 19 | 2 | 8 | 2 | 1 | 2 | 42 |
| ಗ್ರಾಮೀಣ ಮೀಸಲಾತಿ | 2 | 1 | 9 | 1 | 2 | 1 | 1 | 2 | 19 |
| ಮಾಜಿ ಸೈನಿಕರು | 1 | 0 | 4 | 0 | 1 | 0 | 0 | 0 | 6 |
| ಕನ್ನಡ ಮಾಧ್ಯಮ ಅಭ್ಯರ್ಥಿ | 0 | 0 | 1 | 0 | 0 | 0 | 0 | 0 | 1 |
| ಯೋಜನೆ ನಿರಾಶ್ರಿತ ಅಭ್ಯರ್ಥಿ | 0 | 0 | 1 | 0 | 0 | 0 | 0 | 0 | 1 |
| ಒಟ್ಟು | 10 | 2 | 34 | 3 | 11 | 3 | 2 | 4 | 69 |

**ಸೂಚನೆ:**

1. ಸಹಾಯಕ ಮಾರ್ಗಕರ್ಮಿ ಹುದ್ದೆಗೆ ಆಯ್ಕೆಯಾಗುವ ಅಭ್ಯರ್ಥಿಗಳನ್ನು ನಿಗಮದ ವ್ಯಾಪ್ತಿಯಲ್ಲಿನ ಯಾವುದೇ ಸ್ಥಳಕ್ಕೆ ನಿಯುಕ್ತಿಗೊಳಿಸಲು **"ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ"** ವು ಅಧಿಕಾರ ಹೊಂದಿದ್ದು, ಖಾಲಿ ಇರುವ ಸ್ಥಳಗಳಿಗೆ ಸಮಾಲೋಚನೆ ಮುಖಾಂತರ ಮೆರಿಟ್ ಆಧಾರದ ಮೇಲೆ ಸ್ಥಳ ನಿಯುಕ್ತಿಗೊಳಿಸಲಾಗುವುದು.
2. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಇಎನ್ 193 ಇಇಬಿ 2012 ಬೆಂಗಳೂರು, ದಿನಾಂಕ: 19.01.2013 ರ ಆದೇಶದನ್ವಯ ಸಹಾಯಕ ಮಾರ್ಗಕರ್ಮಿ ಹುದ್ದೆಗಳ ನೇಮಕಾತಿಯಲ್ಲಿ ಶೇಕಡಾ 30 ರಷ್ಟು ಮಹಿಳಾ ಮೀಸಲಾತಿಗೆ ಕನಾಟಕ ಸಿವಿಲ್ ಸೇವಾ(ಸಾಮಾನ್ಯ ನೇಮಕಾತಿ) ನಿಯಮ, 1977 ರ ನಿಯಮ 9(1 ಬಿ) ಯ ಮೂರನೇ ಪರಂತುಕದನ್ವಯ ಮಹಿಳಾ ಅಭ್ಯರ್ಥಿಗಳಿಗೆ ನೀಡುವ ಮೀಸಲಾತಿಯಿಂದ ವಿನಾಯಿತಿಯನ್ನು ನೀಡಿರುವುದರಿಂದ, ಮಹಿಳಾ ಅಭ್ಯರ್ಥಿಗಳಿಗೆ ಹುದ್ದೆಗಳಲ್ಲಿ ಮೀಸಲಾತಿ ಕಲ್ಪಿಸಿರುವುದಿಲ್ಲ.
3. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಇಎನ್ 115 ಇಇಬಿ 2010 (ಭಾಗ-2) ಬೆಂಗಳೂರು, ದಿನಾಂಕ: 25.01.2012 ರ ಆದೇಶದನ್ವಯ ಸಹಾಯಕ ಮಾರ್ಗಕರ್ಮಿ ಹುದ್ದೆಗಳ ನೇಮಕಾತಿಯಲ್ಲಿ ಅಂಗವಿಕಲ ವ್ಯಕ್ತಿಗಳ(ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಸಂಪೂರ್ಣ ಭಾಗವಹಿಸುವಿಕೆ) ಅಧಿನಿಯಮ, 1995 ರ ಕಲಂ 32 ರನ್ವಯ ಅಂಗವಿಕಲ ಅಭ್ಯರ್ಥಿಗಳಿಗೆ ನೀಡುವ ಮೀಸಲಾತಿಯಿಂದ ವಿನಾಯಿತಿಯನ್ನು ನೀಡಿರುವುದರಿಂದ, ಅಂಗವಿಕಲ ಅಭ್ಯರ್ಥಿಗಳಿಗೆ ಹುದ್ದೆಗಳಲ್ಲಿ ಮೀಸಲಾತಿ ಕಲ್ಪಿಸಿರುವುದಿಲ್ಲ.

2. **ಅಗತ್ಯ ವಿದ್ಯಾರ್ಹತೆ :**

| | | |
|---|---|---|
| (i) | ಕವಿಮಂ/ ಕವಿಪ್ರನಿನಿ ಕೈಗಾರಿಕಾ ತರಬೇತಿ ಕೇಂದ್ರಗಳಲ್ಲಿ ಮೂರು ವರ್ಷಗಳ ಅವಧಿಯ ತರಬೇತಿ ಹೊಂದಿದ ಅಭ್ಯರ್ಥಿಗಳಿಗೆ | ಹತ್ತನೇ ತರಗತಿಯ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರತಕ್ಕದ್ದು.<br>ಮತ್ತು<br>ಕವಿಮಂ/ ಕವಿಪ್ರನಿನಿ ಕೈಗಾರಿಕಾ ತರಬೇತಿ ಕೇಂದ್ರದಿಂದ ಮೂರು ವರ್ಷದ **"ಲೈನಮನ್ ವೃತ್ತಿ/ ಎಲೆಕ್ಟ್ರಿಷಿಯನ್ ವೃತ್ತಿ"** ಯಲ್ಲಿ ಉತ್ತೀರ್ಣರಾಗಿ ಐ.ಟಿ.ಸಿ ಪ್ರಮಾಣ ಪತ್ರ ಹೊಂದಿರತಕ್ಕದ್ದು. |

**ಸೂಚನೆ:** ಮೇಲೆ ತಿಳಿಸಿರುವ ವಿಷಯಗಳನ್ನು ಹೊರತುಪಡಿಸಿ ಇತರೆ ವಿಷಯಗಳಲ್ಲಿ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಾರದು.

**ಇತರೇ ಅರ್ಹತೆಗಳು :**

1. **ಕನ್ನಡ**ದಲ್ಲಿ ಓದುವ ಮತ್ತು ಬರೆಯುವ ಜ್ಞಾನ ಹೊಂದಿರಬೇಕು.
2. ತೃಪ್ತಿಕರ ನೇತ್ರ ದೃಷ್ಟಿಯನ್ನು ಹೊಂದಿರಬೇಕು.
3. ತೃಪ್ತಿಕರ ದೇಹದಾರ್ಢ್ಯವನ್ನು ಹೊಂದಿರಬೇಕು ಮತ್ತು ಸಹನ ಶಕ್ತಿಯ ಪರೀಕ್ಷೆಯಲ್ಲಿ ಅರ್ಹತೆಗಳಿಸಬೇಕು.

3. **ಅರ್ಹತೆ :**

ಅರ್ಹತಾದಾಯಕ ಪರೀಕ್ಷೆಗಳಲ್ಲಿ ಕೆಳಗೆ ತಿಳಿಸಿರುವಷ್ಟು ಕನಿಷ್ಠ ಶೇಕಡವಾರು ಅಂಕಗಳನ್ನು ಪಡೆದಿರುವಂತಹ ಅಭ್ಯರ್ದಿಗಳು ಮಾತ್ರ ಮೇಲೆ ತಿಳಿಸಿರುವ ಹುದ್ದೆಗಳಿಗೆ ಅರ್ಜಿಯನ್ನು ಸಲ್ಲಿಸಲು ಅರ್ಹರಾಗಿರುತ್ತಾರೆ.

| ಕ್ರ.ಸಂ | ವರ್ಗ | ಶೇಕಡಾವಾರು |
|---|---|---|
| (ಅ) | ಸಾಮಾನ್ಯ ವರ್ಗಕ್ಕೆ ಸೇರಿದ ಅಭ್ಯರ್ಥಿಗಳು | 60% |
| (ಆ) | ಪ್ರವರ್ಗ IIA, IIB, IIIA, IIIB ಗೆ ಸೇರಿದ ಅಭ್ಯರ್ಥಿಗಳು | 50% |
| (ಇ) | ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗ ಹಾಗೂ ಪ್ರವರ್ಗ – I ಕ್ಕೆ ಸೇರಿದ ಅಭ್ಯರ್ಥಿಗಳು | ತೇರ್ಗಡೆ |

4. **ಆಯ್ಕೆ :**

1. ಮೇಲಿನ ಹುದ್ದೆಗಳಿಗೆ ಆಯ್ಕೆಯನ್ನು ಅರ್ಹತಾದಾಯಕ ವಿದ್ಯಾರ್ಹತೆಯಲ್ಲಿ ಗಳಿಸಿರುವ ಶೇಕಡಾವಾರು ಅಂಕಗಳ ಶ್ರೇಷ್ಠತೆ ಆಧಾರದ ಮೇಲೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.
2. ಸಹನ ಶಕ್ತಿಯ ಪರೀಕ್ಷೆಗೆ ಅಭ್ಯರ್ಥಿಗಳನ್ನು ಅರ್ಹತೆ ಆಧಾರದ ಮೇಲೆ 1 : 5 ರ ಅನುಪಾತದಲ್ಲಿ ಕರೆಯಲಾಗುವುದು.
3. ಸಹನ ಶಕ್ತಿ ಪರೀಕ್ಷೆ ಸಮಯದಲ್ಲಿ ಸಕ್ಷಮ ವೈದ್ಯಕೀಯ ಪ್ರಾಧಿಕಾರಿಗಳಿಂದ ಅಭ್ಯರ್ಥಿಗಳ ವೈದ್ಯಕೀಯ ತಪಾಸಣೆಯನ್ನು ನಡೆಸಲಾಗುತ್ತದೆ. ಸದರಿ ವೈದ್ಯಕೀಯ ತಪಾಸಣೆ ಸಮಯದಲ್ಲಿ ಅಭ್ಯರ್ಥಿಗಳು ತೃಪ್ತಿಕರ ದೇಹದಾರ್ಢ್ಯವನ್ನು ಹೊಂದಿರಬೇಕು.
4. ಸಹನ ಶಕ್ತಿಯ ಪರೀಕ್ಷೆಗೆ ಈ ಕೆಳಗಿನ ಸ್ಪರ್ಧೆಗಳನ್ನು ನಿಗದಿಪಡಿಸಲಾಗಿದೆ :

| | | |
|---|---|---|
| ಅ) 100 ಮೀಟರ ಓಟ | – | 14 ಸೆಕೆಂಡ್‌ಗಳು |
| ಆ) ಸ್ಕಿಪ್ಪಿಂಗ್ | – | ಒಂದು ನಿಮಿಷದಲ್ಲಿ 50 ಬಾರಿ |
| ಇ) ಶಾಟ್ ಫುಟ್ 12 ಪೌಂಡ್‌ಗಳು | – | 8 ಮೀಟರ್ ಎಸೆತ (3 ಅವಕಾಶಗಳು) |
| ಈ) ವಿದ್ಯುತ್ **ಕಂಬ ಹತ್ತುವುದು** | – | 8 ಮೀಟರ್ ಎತ್ತರ (ಕಡ್ಡಾಯ) |
| ಉ) 800 ಮೀಟರ್ ಓಟ | – | 3 ನಿಮಿಷಗಳು |

5. ಸಹನ ಶಕ್ತಿಯ ಪರೀಕ್ಷೆಯ ಸ್ಪರ್ಧೆಗಳಿಗೆ ಯಾವುದೇ ಅಂಕಗಳನ್ನು ನಿಗದಿಪಡಿಸಿರುವುದಿಲ್ಲ. ಅಭ್ಯರ್ಥಿಗಳು ಆಯ್ಕೆಗೆ ಅರ್ಹರಾಗಲು **ಕಡ್ಡಾಯವಾಗಿ ವಿದ್ಯುತ್ ಕಂಬವನ್ನು ಹತ್ತುವುದು** (ಸ್ಪರ್ಧೆ ಸಂಖ್ಯೆ : ಈ) ಹಾಗೂ ಇನ್ನುಳಿದ ಕನಿಷ್ಠ ಎರಡು ಸ್ಪರ್ಧೆಗಳಲ್ಲಿ ಅರ್ಹತೆಯನ್ನು ಹೊಂದಬೇಕಿರುತ್ತದೆ ( ಸ್ಪರ್ಧೆ ಸಂಖ್ಯೆ : ಅ. ಆ. ಇ. ಉ).

6. ಸಹನ ಶಕ್ತಿ ಪರೀಕ್ಷೆಯನ್ನು ಚಾವಿಸನಿನಿ ವ್ಯಾಪ್ತಿಯ 5 ಜಿಲ್ಲೆಗಳಾದ ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನ ಮತ್ತು ಕೊಡಗು ಜಿಲ್ಲೆಗಳ ಕೇಂದ್ರ ಸ್ಥಾನದಲ್ಲಿ ನಡೆಸಲಾಗುವುದು.

7. ವೆಬ್ ಸೈಟ್/ದಿನಪತ್ರಿಕೆಗಳಲ್ಲಿ ಸಹನ ಶಕ್ತಿ ಪರೀಕ್ಷೆಯ ಸ್ಥಳ ಮತ್ತು ದಿನಾಂಕವನ್ನು ಶಾರ್ಟ್ ಲಿಸ್ಟ್ **(Shortlist) ಮಾಡಿದ** ಅಭ್ಯರ್ಥಿಗಳಿಗೆ ತಿಳಿಸಲಾಗುವುದು. ಇ-ಮೇಲ್ ವಿಳಾಸ ಮತ್ತು ಮೊಬೈಲ್ ಸಂಖ್ಯೆ ಕೊಟ್ಟಂತಹ ಅಭ್ಯರ್ಥಿಗಳಿಗೆ ಇವುಗಳಲ್ಲಿ ಯಾವುದಾದರೂ ಒಂದು ಮಾಧ್ಯಮದ ಮುಖಾಂತರ ತಿಳಿಸಲಾಗುವುದು.

8. ಶಾರ್ಟ್ ಲಿಸ್ಟ್ Shortlist ಮಾಡಿದ ಅಭ್ಯರ್ಥಿಗಳ ಮೂಲ ದಾಖಲಾತಿಗಳ / ಪ್ರಮಾಣ ಪತ್ರಗಳ ಇತರ ಮೂಲ ದಾಖಲೆಗಳ ಪರಿಶೀಲನೆಯನ್ನು ಸಹನ ಶಕ್ತಿ ಪರೀಕ್ಷೆಯ ಸಂದರ್ಭದಲ್ಲಿ ಮಾಡಲಾಗುವುದು. ಸಹನ ಶಕ್ತಿ ಪರೀಕ್ಷೆಯ ಸಮಯಕ್ಕೆ ಮೂಲ ದಾಖಲಾತಿಗಳು/ಪ್ರಮಾಣ ಪತ್ರಗಳ ಇತರೆ ಮೂಲ ದಾಖಲಾತಿಗಳ ದೃಢೀಕೃತ ಪ್ರತಿಗಳನ್ನು ಸಲ್ಲಿಸುವುದು.

## 5. ವಯೋಮಿತಿ :

ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದಂದು ಕನಿಷ್ಠ 18 ವರ್ಷ ತುಂಬಿದವರಾಗಿರಬೇಕು ಹಾಗೂ ಈ ಕೆಳಗಿನ ಗರಿಷ್ಠ ವಯೋಮಿತಿಯನ್ನು ಮೀರಿರಬಾರದು;

| | | |
|---|---|---|
| i) **ಸಾಮಾನ್ಯ ಅರ್ಹತೆಗೆ** ಸೇರಿದ ಅಭ್ಯರ್ಥಿಗಳು | – | 35 **ವರ್ಷ** |
| ii) **ಪ್ರವರ್ಗ IIA, IIB, IIIA ಮತ್ತು IIIB** ಗೆ ಸೇರಿದ ಅಭ್ಯರ್ಥಿಗಳು | – | 38 **ವರ್ಷ** |
| iii) **ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ – I** ಕ್ಕೆ ಸೇರಿದ ಅಭ್ಯರ್ಥಿಗಳು | – | 40 **ವರ್ಷ** |

**ಟಿಪ್ಪಣಿ:**

a) ಕವಿಮಂ/ ಕವಿಪ್ರನಿನಿ ತರಬೇತಿ ಕೇಂದ್ರದಿಂದ **"ಮಾರ್ಗಕರ್ಮಿ"** ವೃತ್ತಿಯಲ್ಲಿ ಮೂರು ವರ್ಷಗಳ ಅವಧಿಯ ತರಬೇತಿ ಹೊಂದಿರುವ ಅಭ್ಯರ್ಥಿಗಳಿಗೆ ಗರಿಷ್ಠ ವಯೋಮಿತಿಯಲ್ಲಿ ತರಬೇತಿ ಹೊಂದಿರುವ ಅವಧಿಯಷ್ಟು(ಗರಿಷ್ಠ 3 ವರ್ಷಗಳವರೆಗೆ) ವಿನಾಯಿತಿಯನ್ನು ನೀಡಲಾಗುವುದು.

b) ಮಾಜಿ ಸೈನಿಕರಿಗೆ ಅವರು ಸಶಸ್ತ್ರ ಪಡೆಯಲ್ಲಿ **ಸೇವೆ ಸಲ್ಲಿಸಿರುವ ಅವಧಿಗೆ, ಮೂರು ವರ್ಷಗಳನ್ನು ಸೇರಿಸಿ,** ಅರ್ಜಿ ಸಲ್ಲಿಸಲು ಅಧಿಸೂಚನೆಯಲ್ಲಿ ನಿಗದಿಪಡಿಸಿರುವ ಕೊನೆಯ ದಿನಾಂಕಕ್ಕೆ **ಗರಿಷ್ಠ** 45 **ವರ್ಷಗಳವರೆಗೆ ವಯೋಮಿತಿಯಲ್ಲಿ ಸಡಿಲಿಕೆಯನ್ನು** ನೀಡಲಾಗುವುದು.

c) ಕವಿಪ್ರವಿನಿ/ ಎಸ್ಕಾಂ ನಿಗಮ/ ಕಂಪನಿಗಳಲ್ಲಿ ಈಗಾಗಲೇ **ಖಾಯಂ ಸೇವೆಯಲ್ಲಿರುವ** ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದಲ್ಲಿ, ಅಂತಹ ಅಭ್ಯರ್ಥಿಗಳಿಗೆ ಗರಿಷ್ಠ ವಯೋಮಿತಿಯಲ್ಲಿ, ಅವರು ಕವಿಪ್ರನಿನಿ/ ಎಸ್ಕಾಂ ನಿಗಮ/ ಕಂಪವಿಗಳಲ್ಲಿ ಸೇವೆ ಸಲ್ಲಿಸಿರುವ ಅವಧಿಯಷ್ಟು(ಗರಿಷ್ಠ ಏಳು ವರ್ಷಗಳ ಮಿತಿಗೊಳಪಟ್ಟು) ಸಡಿಲಿಕೆಯನ್ನು ನೀಡಲಾಗುವುದು.

d) **ಕವಿಪ್ರನಿನಿ/ ಎಸ್ಕಾಂ ನಿಗಮ/ ಕಂಪನಿಗಳಲ್ಲಿ,** ಗ್ಯಾಂಗಮನ್/ ಬಿಲ್ ಬಾಯ್ಸ್/ ಪ್ರೊಬೇಷನರಿ ಮಜ್ದೂರ್/ ತಾತ್ಕಾಲಿಕ ಶುಚಿಗಾರರು/ ಸ್ಯಾನಿಟರಿ ವರ್ಕರ್ ಮತ್ತು ತಾತ್ಕಾಲಿಕ ಮಾಪಕ ಓದುಗರಾಗಿ ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸಿರುವ/ ಸೇವೆ ಸಲ್ಲಿಸುತ್ತಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದರೆ, ಅಂತಹ ಅಭ್ಯರ್ಥಿಗಳಿಗೆ ಗರಿಷ್ಠ ವಯೋಮಿತಿಯಲ್ಲಿ ಅವರು ಕವಿಪ್ರನಿನಿ/ ಎಸ್ಕಾಂ ನಿಗಮ/ ಕಂಪನಿಗಳಲ್ಲಿ **ಸೇವೆ ಸಲ್ಲಿಸಿರುವ ಅವಧಿಯಷ್ಟು(ಗರಿಷ್ಠ 10 ವರ್ಷಗಳ ಮಿತಿಗೊಳಪಟ್ಟು) ಸಡಿಲಿಕೆಯನ್ನು** ನೀಡಲಾಗುವುದು. ಸದರಿ ವಯೋಮಿತಿಯ ರಿಯಾಯಿತಿಯನ್ನು ಪಡೆಯಲು ಸಂಬಂಧಿಸಿದ ಕವಿಪ್ರನಿನಿ/ ಎಸ್ಕಾಂ ಕಛೇರಿಯಿಂದ "ಪ್ರಮಾಣ ಪತ್ರ" ವನ್ನು ಪಡೆಯುವುದು.

e) ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಇ ಎನ್ 193 ಇಇಬಿ 2012 ದಿ:19.01.2013 ರನ್ವಯ ಸಹಾಯಕ ಮಾರ್ಗಕರ್ಮಿಗಳ ನೇರನೇಮಕಾತಿಯಲ್ಲಿ ಮಹಿಳ ಅಭ್ಯರ್ಥಿಗಳಿಗೆ 30% ಮೀಸಲಾತಿ ನೀಡುವಿಕೆಯಿಂದ ವಿನಾಯಿತಿ ನೀಡಲಾಗಿರುತ್ತದೆ.

## 6. ಅರ್ಜಿ ಶುಲ್ಕ :

1. ಸಾಮಾನ್ಯ ವರ್ಗ ಹಾಗೂ ಪ್ರವರ್ಗ I, IIA, IIB, IIIA, IIIB ಗೆ ಸೇರಿದ ಅಭ್ಯರ್ಥಿಗಳಿಗೆ – ರೂ. 400/- (ರೂ.ನಾಲ್ಕನೂರು ರೂಪಾಯಿಗಳು ಮಾತ್ರ)
2. ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗಕ್ಕೆ ಸೇರಿದ ಅಭ್ಯರ್ಥಿಗಳಿಗೆ – ರೂ. 200/- (ರೂ.ಇನ್ನೂರು ರೂಪಾಯಿಗಳು ಮಾತ್ರ).

7. **ಅರ್ಜಿ ಸಲ್ಲಿಸುವಿಕೆ :**

ಅ. ಅರ್ಜಿಯನ್ನು ಕಡ್ಡಾಯವಾಗಿ ಚಾವಿಸನಿನಿ ವೆಬ್ ಸೈಟ್ http://www.cescmysore.org. ನ್ನು ಲಾಗ್ ಮಾಡುವುದರೊಂದಿಗೆ "ಆನ್ ಲೈನ್" ಮೂಲಕ ಸಲ್ಲಿಸಬೇಕು. ಇತರೇ ಯಾವುದೇ ವಿಧಾನದಲ್ಲಿ ಸಲ್ಲಿಸುವ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

ಆ. ಆನ್ ಲೈನ್ ಅರ್ಜಿ ಸಲ್ಲಿಸಲು ವೆಬ್‌ಸೈಟ್ ಸೌಲಭ್ಯವನ್ನು **ದಿನಾಂಕ 10.03.2015 ರಿಂದ 30.03.2015ರ** ವರೆಗೆ ಒದಗಿಸಲಾಗುವುದು. ಅರ್ಜಿಯನ್ನು ಸಲ್ಲಿಸಲು **ದಿನಾಂಕ.30.03.2015** ರವರೆಗೆ ಅವಕಾಶವಿರುತ್ತದೆ.

ಇ. ಆನ್ ಲೈನ್ ಅರ್ಜಿಗಳನ್ನು ಸಲ್ಲಿಸಿದ ನಂತರ ದೊರೆಯುವ ಚಲನ್ ಮೂಲಕ ನಿಗದಿತ ಶುಲ್ಕವನ್ನು ನಿಮ್ಮ ಸಮೀಪದ ಗಣಕೀಕೃತ ಅಂಚೆ ಕಛೇರಿಯಲ್ಲಿ ಪಾವತಿಸತಕ್ಕದ್ದು. ಒಂದು ವೇಳೆ ಅರ್ಜಿ ಸಲ್ಲಿಸಿ ಶುಲ್ಕ ಪಾವತಿಸದಿದ್ದಲ್ಲಿ, ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಈ. ಅರ್ಜಿ ಶುಲ್ಕವನ್ನು **ದಿನಾಂಕ 10.03.2015 ರಿಂದ 31.03.2015 ರ** ವರೆಗೆ ಗಣಕೀಕೃತ ಅಂಚೆಕಛೇರಿಯ ವ್ಯವಹಾರದ ವೇಳೆಯಲ್ಲಿ ಪಾವತಿಸತಕ್ಕದ್ದು.

ವಿಶೇಷ ಸೂಚನೆ:

- ಅರ್ಜಿ ಶುಲ್ಕವನ್ನು **ದಿನಾಂಕ 10.03.2015 ರಿಂದ 31.03.2015 ರ** ವರೆಗೆ ಅಂಚೆ ಕಛೇರಿಯ ವ್ಯವಹಾರದ ವೇಳೆಯನ್ನು ಹೊರತು ಪಡಿಸಿ ನಿಗದಿತ ಅವಧಿಯ ಮುಂಚೆ/ನಂತರ ಪಾವತಿಸಿದ ಅರ್ಜಿ ಶುಲ್ಕವನ್ನು ಯಾವುದೇ ಸಂದರ್ಭದಲ್ಲಿ ಹಿಂದಿರುಗಿಸಲಾಗುವುದಿಲ್ಲ ಅಥವಾ ಅದನ್ನು ಇತರೆ ಯಾವುದೇ ನೇಮಕಾತಿಗಳಿಗೆ ಹೊಂದಿಸಿಕೊಳ್ಳಲಾಗುವುದಿಲ್ಲ.

ಉ. ಒಮ್ಮೆ ಅರ್ಜಿ ಶುಲ್ಕವನ್ನು ಪಾವತಿಸಿದ ನಂತರ ಅದನ್ನು ಯಾವುದೇ ಸಂದರ್ಭದಲ್ಲಿ ಹಿಂದಿರುಗಿಸಲಾಗುವುದಿಲ್ಲ ಅಥವಾ ಅದನ್ನು ಇತರೇ ಯಾವುದೇ ನೇಮಕಾತಿಗಳಿಗೆ ಹೊಂದಿಸಿಕೊಳ್ಳಲಾಗುವುದಿಲ್ಲ.

ಊ. ಆನ್‌ಲೈನ್ ಅರ್ಜಿಗಳನ್ನು ಭರ್ತಿ ಮಾಡಿದ ನಂತರ ಅಭ್ಯರ್ಥಿಗಳು ಸ್ವೀಕೃತಿ ಪತ್ರ ಮತ್ತು ಅಂಚೆ ಚಲನ್ ಪ್ರತಿಗಳ ಮುದ್ರಿತ ಪ್ರತಿಗಳನ್ನು (print-out) ತೆಗೆದುಕೊಳ್ಳತಕ್ಕದ್ದು.

ಋ. ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕದ ವರೆಗೆ ವಿಳಂಬ ಮಾಡದೇ ಮುಂಚಿತವಾಗಿ ಅರ್ಜಿಗಳನ್ನು ಸಲ್ಲಿಸತಕ್ಕದ್ದು.

8. **ಸಾಮಾನ್ಯ ಸೂಚನೆಗಳು :**

ಅ. ಭಾರತೀಯ ನಾಗರೀಕರು ಮಾತ್ರ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.

ಆ. ಅಭ್ಯರ್ಥಿಯು ಅಪರಾಧಿಯೆಂದು ಘೋಷಿಸಲ್ಪಟ್ಟಿದ್ದರೆ ಅಥವಾ ಕೇಂದ್ರ ಲೋಕಸೇವಾ/ ರಾಜ್ಯ ಲೋಕ ಸೇವಾ ಆಯೋಗದಿಂದ ಯಾವುದೇ ಪರೀಕ್ಷೆಯನ್ನು ಬರೆಯಲು ಅಥವಾ ಯಾವುದೇ ಹುದ್ದೆಗೆ ಆಯ್ಕೆಯಾಗಲು ತಾತ್ಕಾಲಿಕವಾಗಿ/ ಖಾಯಂ ಆಗಿ ತಡೆಹಿಡಿಯಲ್ಪಟ್ಟಿದ್ದರೆ ಅಂತಹವರನ್ನು ನೇಮಕಾತಿಗೆ ಪರಿಗಣಿಸಲಾಗುವುದಿಲ್ಲ. ಆದಾಗ್ಯೂ ಕಂಪನಿಯು ಆಂತಹ ಪ್ರಕರಣವನ್ನು ಕೂಲಂಕುಷವಾಗಿ ಪರಿಶೀಲಿಸಿದ ನಂತರ, ಅಂತಹ ಅಭ್ಯರ್ಥಿಯು ಅರ್ಹರೆಂದು ತೀರ್ಮಾನಿಸಿದ್ದಲ್ಲಿ ಮಾತ್ರ ನೇಮಕಾತಿಗೆ ಅರ್ಹರಾಗಿರುತ್ತಾರೆ.

ಇ. ಅರ್ಜಿಯಲ್ಲಿ ಸುಳ್ಳು ಮಾಹಿತಿಗಳನ್ನು ಒದಗಿಸಿ, ಉದ್ಯೋಗ ಪಡೆದ ಅಭ್ಯರ್ಥಿಗಳನ್ನು ಸೇವೆಯಿಂದ ವಜಾಗೊಳಿಸಲಾಗುವುದು.

ಈ. ಅರ್ಜಿಯಲ್ಲಿ ನೀಡುವ ಅಂಚೆ ವಿಳಾಸವು ಅಂತಿಮವಾಗಿದ್ದು; ವಿಳಾಸ ಬದಲಾವಣೆಗೆ ಸಂಬಂಧಿಸಿದಂತೆ ಯಾವುದೇ ಪತ್ರವ್ಯವಹಾರಕ್ಕೆ ಅವಕಾಶವಿರುವುದಿಲ್ಲ.

ಉ. ಅರ್ಜಿಗಳನ್ನು "ಆನ್‌ಲೈನ್" ದಲ್ಲಿ ಭರ್ತಿ ಮಾಡುವ ಪೂರ್ವದಲ್ಲಿ, ಅರ್ಹ ಅಭ್ಯರ್ಥಿಗಳು ವೆಬ್‌ಸೈಟ್‌ನಲ್ಲಿ ಅರ್ಜಿ ನಮೂನೆಯೊಂದಿಗೆ ಲಭ್ಯವಿರುವ ಸೂಚನೆಗಳನ್ನು ಗಮನಿಸತಕ್ಕದ್ದು.

ಊ. ಅಭ್ಯರ್ಥಿಗಳ ಅರ್ಹತೆ ಕುರಿತು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದ ತೀರ್ಮಾನವೇ ಅಂತಿಮವಾಗಿದ್ದು, ಅಭ್ಯರ್ಥಿಗಳು ಇದಕ್ಕೆ ಬದ್ಧರಾಗಿರತಕ್ಕದ್ದು.

ಋ. ನೇಮಕಾತಿಗಾಗಿ ಯಾವುದೇ ವಿಧದ ಪ್ರಭಾವ ಬೀರಲು ಅಭ್ಯರ್ಥಿ ನಡೆಸುವ ಪ್ರಯತ್ನವು, ಅಭ್ಯರ್ಥಿಯನ್ನು ಅನರ್ಹಗೊಳಿಸುವುದು.

ಎ. ಅಭ್ಯರ್ಥಿಗಳು ಮೂಲ ದಾಖಲಾತಿಗಳು/ ಪ್ರಮಾಣ ಪತ್ರಗಳ ಇತರೆ ಮೂಲ ದಾಖಲಾತಿಗಳನ್ನು ಸಲ್ಲಿಸಲು ಕರೆ ನೀಡಿದಾಗ, ಪರಿಶೀಲನೆಗಾಗಿ **"ದೃಢೀಕೃತ ಪ್ರತಿ"** ಗಳೊಂದಿಗೆ ಹಾಜರಾಗಬೇಕಾಗುತ್ತದೆ.

ಏ. ಅಭ್ಯರ್ಥಿಗಳು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ I, IIA, IIB, IIIA ಮತ್ತು IIIB ಯಲ್ಲಿನ ಮೀಸಲಾತಿಗೆ ಹಾಗೂ ಸಮತಲ ಮೀಸಲಾತಿಗೆ ಸಂಬಂಧಿಸಿದಂತೆ, ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ ಒಳಗೆ ಕರ್ನಾಟಕ ಸರ್ಕಾರದಲ್ಲಿ ಚಾಲ್ತಿಯಲ್ಲಿರುವ ವಿವಿಧ ಆದೇಶಗಳನ್ವಯ ಜಾತಿ ಪ್ರಮಾಣ ಪತ್ರವನ್ನು ಸಕ್ಷಮ ಪ್ರಾಧಿಕಾರದಿಂದ ಪಡೆದಿರಬೇಕು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ I, IIA, IIB, IIIA ಮತ್ತು IIIB ರ ಅಡಿಯಲ್ಲಿ ಮೀಸಲಾತಿಗೆ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ನೇಮಕಾತಿಗೆ ಆಯ್ಕೆಯಾದಲ್ಲಿ ಹಾಗೂ ಅವರು ಯಾವುದೇ ನೇರ ಮೀಸಲಾತಿಯಲ್ಲಿ ಆಯ್ಕೆ ಆದರೂ ಸಹ ನೇಮಕಾತಿ ಆದೇಶ ನೀಡಲಾಗುತ್ತದೆ. ಸದರಿ ಪ್ರಮಾಣ ಪತ್ರಗಳ ನೈಜತೆ ಕುರಿತಂತೆ ಪರಿಶೀಲನೆಗೆ, ಸಂಬಂಧಿಸಿದ ಸಕ್ಷಮ ಪ್ರಾಧಿಕಾರಿಗಳಿಂದ ನೀಡಲಾಗುವ **"ಸಿಂಧುತ್ವ ಪ್ರಮಾಣ ಪತ್ರ"** ಕ್ಕೆ ಸದರಿ ನೇಮಕಾತಿ ಆದೇಶ ಬದ್ಧವಾಗಿರುತ್ತದೆ.

ಐ. ನೇಮಕಾತಿಗೆ ಆಯ್ಕೆಯಾದ ಅಭ್ಯರ್ಥಿಯು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದಲ್ಲಿ ಕಡ್ಡಾಯವಾಗಿ ಕನಿಷ್ಠ ಒಂದು ವರ್ಷ ಅವಧಿಯವರೆಗೆ ಸೇವೆಯನ್ನು ಮಾಡುವುದಾಗಿ ರೂ.200/-(ರೂಪಾಯಿಗಳು ಎರಡು ನೂರು ಮಾತ್ರ) ಛಾಪಾ ಕಾಗದ ಮೇಲೆ ಮುಚ್ಚಳಿಕೆಯನ್ನು ನೀಡುವುದು. ಅವನು/ ಅವಳು ಒಂದು ವರ್ಷ ಅಥವಾ ಈ ಉದ್ದೇಶಕ್ಕೆ ವಿಶೇಷವಾಗಿ ರೂಪಿಸಿರುವ ನಿಯಮಗಳಲ್ಲಿ ಅವಕಾಶ ಮಾಡಿ ಕೊಡಬಹುದಾದಂತಹ ಅವಧಿಯವರೆಗೆ ಅರ್ಹ ಪರಿಕ್ಷೇಣೆಯಲ್ಲಿರಬೇಕು.

ಒ. ಅಗತ್ಯವಿದ್ದಲ್ಲಿ, ಹೊಸದಾಗಿ ಪ್ರಕಟಣೆ ನೀಡುವ ಹಕ್ಕನ್ನು ಕಾಯ್ದಿರಿಸಿದೆ; ನಿಗಮವು ಯಾವುದೇ ಹಂತದಲ್ಲಾದರೂ ನೇಮಕಾತಿ ಪ್ರಕ್ರಿಯೆಯನ್ನು ರದ್ದುಗೊಳಿಸುವ ಹಕ್ಕನ್ನು ಹೊಂದಿರುತ್ತದೆ.

ಓ. ನೇಮಕಾತಿ ಪ್ರಕ್ರಿಯೆ ಸಂದರ್ಭದಲ್ಲಿ ಪತ್ರ ವ್ಯವಹಾರ ಅಥವಾ ವಿಚಾರಣೆಗಳಿಗೆ ಅವಕಾಶವಿರುವುದಿಲ್ಲ. ಈ ಉದ್ಯೋಗ ಪ್ರಕಟಣೆಯೊಂದಿಗೆ ಲಗತ್ತಿಸಿರುವ **"ಸಹಾಯಕ ಮಾರ್ಗದಾಳು** ಹುದ್ದೆಗಳ ನೇಮಕಾತಿಗೆ ಅಭ್ಯರ್ಥಿಗಳಿಗೆ ಸೂಚನೆ" ಗಳನ್ನು ಗಮನಿಸುವುದು ಹಾಗೂ ನೇಮಕಾತಿ ಪ್ರಕ್ರಿಯೆಯ ವಿವಿಧ ಹಂತಗಳ ಮಾಹಿತಿಯನ್ನು ಚಾವಿಸನಿನಿ ವೆಬ್‌ಸೈಟ್ http://www.cescmysore.org/ ನಲ್ಲಿ ಲಭ್ಯಗೊಳಿಸಲಾಗುವುದು.

ಔ. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಇಎನ್ 115 ಇಇಬಿ 2010 (ಭಾಗ-2) ದಿನಾಂಕ: 25.01.2012ರನ್ವಯ The Persons with Disabilities( Equal Opportunities Protection of Rights and Full Participation )Act,1995 ರ ಸೆಕ್ಷನ್ 32ರನ್ವಯ ವಿಕಲಚೇತನರಿಗೆ ನೀಡಬೇಕಾದ ಮೀಸಲಾತಿಯಿಂದ ವಿನಾಯಿತಿ ದೊರಕಿರುತ್ತದೆ.

**ಸೂಚನೆಗಳು:**

| | | |
|---|---|---|
| i. | ಗ್ರಾಮೀಣ ಅಭ್ಯರ್ಥಿ | ಗ್ರಾಮೀಣ ಮೀಸಲಾತಿ ಪಡೆಯ ಬಯಸುವ ಅಭ್ಯರ್ಥಿಗಳು, ಸರ್ಕಾರವು ತನ್ನ ಆದೇಶ ಸಂಖ್ಯೆ: DPAR 96 SRR 2005, ದಿನಾಂಕ: 10.08.2005 ರಲ್ಲಿ ಸೂಚಿಸಿರುವ, ಗ್ರಾಮೀಣ ಪ್ರದೇಶಗಳಲ್ಲಿ ಒಂದನೇ ತರಗತಿಯಿಂದ, ಹತ್ತನೇ ತರಗತಿಯವರೆಗೆ ನಿರಂತರವಾಗಿ ವ್ಯಾಸಾಂಗ ಮಾಡಿರಬೇಕು. ಗ್ರಾಮೀಣ ಪ್ರದೇಶಗಳಲ್ಲಿ ವ್ಯಾಸಂಗ ಮಾಡಿರುವುದನ್ನು ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರು ನಿಗದಿತ ನಮೂನೆಯಲ್ಲಿ ದೃಢೀಕರಿಸಿರಬೇಕು ಮತ್ತು ಇದಕ್ಕೆ ಕ್ಷೇತ್ರ ಶಿಕ್ಷಣಾಧಿಕಾರಿ/ ಜಿಲ್ಲಾ ಮಟ್ಟದ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರು 'ಮೇಲು ಸಹಿ' ಮಾಡಿರಬೇಕು |
| ii. | ಮಾಜಿ ಸೈನಿಕರು | ಸೇನೆಯಿಂದ ಬಿಡುಗಡೆ ಹೊಂದಿರುವುದಕ್ಕೆ ಸಕ್ಷಮ ಪ್ರಾಧಿಕಾರ ನೀಡಿದ ಪ್ರಮಾಣ ಪತ್ರ ಹೊಂದಿರಬೇಕು |
| iii. | ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿ | ಕನ್ನಡ ಮಾಧ್ಯಮದಲ್ಲಿ ನಿರಂತರವಾಗಿ ಒಂದನೇ ತರಗತಿಯಿಂದ, ಹತ್ತನೇ ತರಗತಿಯವರೆಗೆ ವ್ಯಾಸಾಂಗ ಮಾಡಿರುವುದನ್ನು ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರು ನಿಗದಿತ ನಮೂನೆಯಲ್ಲಿ ದೃಢೀಕರಿಸಿರಬೇಕು ಮತ್ತು ಇದಕ್ಕೆ ಕ್ಷೇತ್ರ ಶಿಕ್ಷಣಾಧಿಕಾರಿ/ ಜಿಲ್ಲಾ ಮಟ್ಟದ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ "ಮೇಲು ಸಹಿ" ಮಾಡಿರಬೇಕು |

| | | |
|---|---|---|
| iv. | ಯೋಜನೆಗಳಿಂದ ನಿರಾಶ್ರಿತಗೊಂಡ ಅಭ್ಯರ್ಥಿ | ಯೋಜನೆಗಳಿಗಾಗಿ ಮನೆ/ ಜಮೀನುಗಳನ್ನು ಕಳೆದುಕೊಂಡಿರುವುದಕ್ಕೆ ಸಂಬಂಧಪಟ್ಟ ಸಕ್ಷಮ ಸರ್ಕಾರಿ ಪ್ರಾಧಿಕಾರಿಯಿಂದ ನೀಡಲ್ಪಟ್ಟ "ಯೋಜನಾ ನಿರಾಶ್ರಿತ ಪ್ರಮಾಣ ಪತ್ರ" ಗಳನ್ನು ಹೊಂದಿರಬೇಕು |

## 9. ಕೆಲಸದ ಸ್ವರೂಪ :

ಕಂಬ ನೆಡಲು ಮತ್ತು ಕೇಬಲ್ ಅಳವಡಿಸಲು, ಗುಂಡಿ ತೆಗೆಯುವುದು, ಕಂಬಗಳ ಮತ್ತು ಇತರ ಸಾಮಾಗ್ರಿಗಳ ಸಾಗಣೆ, ವಿದ್ಯುತ್ ವಾಹಕಗಳ ಪಹರೆ, ವಿದ್ಯುತ್ ಸಂಪರ್ಕಗೊಳಿಸುವುದು, ದಾರಿ ದೀಪಗಳ ನಿರ್ವಹಣೆ, ದಾರಿ ದೀಪಗಳ ಬದಲಾವಣೆ, ವಿದ್ಯುತ್ ಕಂಬ ಏರಿ ವಾಹಕ ಎಳೆಯುವುದು, ದುರಸ್ತಿ ಕೆಲಸ, ಪೈಂಟಿಂಗ್ ಕೆಲಸ ನಿರ್ವಹಣೆ, ಸಾಲಾಳು/ತಂತಿ ಕರ್ಮಿಗಳಿಗೆ ಸಹಾಯಕರಾಗಿ ತಂತಿ ಮಾರ್ಗಗಳ ನಿರ್ವಹಣೆ ಕೆಲಸ, ಗ್ರಾಹಕರ ದೂರು ಕರೆಗಳನ್ನು ನಿರ್ವಹಿಸುವುದು, ವಿದ್ಯುತ್ ಮಾರ್ಗದಲ್ಲಿನ ಅಡಚಣೆಗಳನ್ನು ಸಂಬಂಧಪಟ್ಟ ಪ್ರಾಧಿಕಾರದ ನಿರ್ದೇಶನದಂತೆ ನಿರ್ವಹಿಸುವುದು. ವಿವಿಧ ಕರ್ತವ್ಯ ನಿರ್ವಹಣೆಯಲ್ಲಿ ಇತರ ಸಹೋದ್ಯೋಗಿಗಳಿಗೆ ಸಹಾಯಕರಾಗಿ ಕಾರ್ಯನಿರ್ವಹಿಸುವುದು. ಕ್ಯಾಂಪ್ ಕರ್ತವ್ಯದಲ್ಲಿದ್ದಾಗ ದಿನಚರಿ ಪುಸ್ತಕವನ್ನು ನಿರ್ವಹಿಸಿ ಕೆಲಸಗಳ ದಾಖಲಾತಿ ಮಾಡಿಕೊಳ್ಳುವುದು ಮತ್ತು ಮೇಲಾಧಿಕಾರಿಗಳು ಕಂಪನಿ ಹಿತದೃಷ್ಟಿಯಿಂದ ಸೂಚಿಸುವ ಕೆಲಸವನ್ನು ನಿರ್ವಹಿಸುವುದು. ಅದೂ ಅಲ್ಲದೇ ತನ್ನ ಹುದ್ದೆಯ ಕರ್ತವ್ಯಕ್ಕೆ ಸಂಬಂಧಿಸಿದಂತೆ ಪಾಳಿ ಕರ್ತವ್ಯವನ್ನು ಸಹ ನಿರ್ವಹಿಸುವುದು.

**ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾಸಂ),**
**ನಿಗಮ ಕಚೇರಿ, ಚಾವಿಸನಿನಿ,**

*ICT Support by*
NATIONAL INFORMATICS CENTRE
THE IT SUPPORT PROFESSIONALS